**ಎರಡನೇ ಬಾರಿ ಸಲ್ಲಿಸಿರುವ ಅರ್ಜಿಯ ಮೇರೆಗೆ ಸಾಕ್ಷಿಯನ್ನು ದಿಃ *27/01/2025* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

***ಮುಂದುವರೆದ ಪಾಟೀ ಸವಾಲು ಃ ಪ್ರತಿವಾದಿ ನಂ.1 ಪರ ವಕೀಲರಿಂದ.***

ಸದರಿ ದಾವೆಯಲ್ಲಿ ಪಿತ್ರಾರ್ಜಿತ ಆಸ್ತಿ ಎಂದರೆ ಬೆಕ್ಕಿರಿಯ ಕೃಷಿ ಜಮೀನು ಮಾತ್ರ ಎಂದರೆ ನಿಜ. ಸದರಿ ಜಮೀನನ್ನು ವಾದಿಯ ಗಂಡನ ಅಣ್ಣ ಮೊದಲಿನಿಂದಲೂ ಸಾಗುವಳಿ ಮಾಡುತ್ತಾರೆ, ಸದ್ಯಕ್ಕೂ ಸಹ ಅವರೇ ಮಾಡುತ್ತಾರೆ. ಸದರಿ ಉತ್ಪನ ನಮಗೆ ಬರುವುದಿಲ್ಲ. ಈ ರೀತಿ ಇರುವಾಗ ಸದರಿ ಪಿತ್ರಾರ್ಜಿತ ಆಸ್ತಿಯ ಉತ್ಪನ ಎಂದು ನಮಗೆ ಯಾವ ಮೊತ್ತವೂ ಬರುವುದಿಲ್ಲ ಎಂದರೆ ನಿಜ.

ನಮ್ಮ ಮನೆತನಕ್ಕೆ ಒಟ್ಟು ಕುಟುಂಬದ ಆಸ್ತಿಯಿಂದ ಬರುವ ಉತ್ಪನ ಯಾವುದು ಇರುವುದಿಲ್ಲ ಎಂದರೆ ನಿಜ. ವಾದಿಯ ಖರ್ಚು ತಿಂಗಳಿಗೆ 3-4 ಸಾವಿರ ರೂಪಾಯಿ ಆಗಬಹುದು ಎಂದರೆ ನಿಜ. ಅವರಿಗೆ ತಿಂಗಳಿಗೆ 6 ಸಾವಿರ ರೂಪಾಯಿ ಪಿಂಚಣಿ ಬರಬಹುದು. ಸದರಿ ಪಿಂಚಣಿ ಕುರಿತು ದಾಖಲೆ ಹಾಜರುಪಡಿಸಲು ಆಗುವುದಿಲ್ಲ. ಎರಡು ಮನೆಗಳ ಬಾಡಿಗೆ ತಲಾ 2 ಸಾವಿರ ರೂಪಾಯಿ ಬರುತ್ತಿದ್ದು, ಅದನ್ನು ಚಂದ್ರಾಬಾಯಿ ಇವರು ತೆಗೆದುಕೊಳ್ಳುತ್ತಾರೆ ಎಂದರೆ ನಿಜ. ಮೊದಲು ಸದರಿ ಬಾಡಿಗೆ ಹೇಮಾ ಇವರು ಪಡೆಯುತ್ತಿದ್ದು, ನಂತರ ಚಂದ್ರಾಬಾಯಿ ಪಡೆಯುತ್ತಿದ್ದಾರೆ.

ಧಾರವಾಡದ ಮಾಳಮಡ್ಡಿಯಲ್ಲಿರುವ ದಾವಾ ಮನೆಯನ್ನು ಯಾವಾಗ, ಎಷ್ಟು ಮೊತ್ತಕೆ ಖರೀದಿ ಹಿಡಿದರು ಎಂಬ ಪ್ರಶ್ನೆಗೆ ಸಾಕ್ಷಿದಾರರು ಚಂದ್ರಾಬಾಯಿ ಮತ್ತು ರಮೇಶ ಇಬ್ಬರೂ ಕೂಡಿ ಖರೀದಿ ಮಾಡಿರುತ್ತಾರೆ, ಯಾವಾಗ ಮತ್ತು ಎಷ್ಟು ಮೊತ್ತಕ್ಕೆ ಎಂದು ನನಗೆ ಗೊತ್ತಿಲ್ಲ. ಚಂದ್ರಾಬಾಯಿ ಸದರಿ ಖರೀದಿಯಲ್ಲಿ ಹಣವನ್ನು ಕೊಟ್ಟಿದ್ದಾಳೆ ಮತ್ತು ರಮೇಶ ಹೆಸರಿನಲ್ಲಿ ತೆಗೆದ ಸಾಲಕ್ಕೆ ಹಣವನ್ನು ತುಂಬಿದ್ದಾರೆ ಎನ್ನುವ ದಾಖಲೆ ಇಲ್ಲ. ಚಂದ್ರಾಬಾಯಿ ಗಂಡ ತೀರಿಕೊಂಡಾಗ ಅವರ ಹತ್ತಿರ ಎಷ್ಟು ಬಂಗಾರವಿತ್ತು ಎಂದು ನನ್ನ ವಾದ ಪತ್ರದಲ್ಲಿ ಬರೆದಿಲ್ಲ ಎಂದರೆ ನಿಜ. ಸದರಿ ಚಂದ್ರಾಬಾಯಿ ಗಂಡ ತೀರಿ ಹೋದ ಬಂದಿರುವ ಹಣದಿಂದ ಅವಳು ಬಾಡಿಗೆ ಮನೆಯ ಠೇವಣಿಯನ್ನು ಬಳಿಸಿಕೊಂಡು ಮಾಳಮಡ್ಡಿಯಲ್ಲಿರುವ ಮನೆಯನ್ನು ಖರೀದಿ ಮಾಡಿರುತ್ತಾರೆ ಎಂದು ಉತ್ತರಿಸುತ್ತಾರೆ. ಸದರಿ ಬಾಡಿಗೆ ಮನೆಯ ಠೇವಣಿಯ ಕುರಿತು ಮತ್ತು ಮಾಲೀಕರ ಹೆಸರು ನನಗೆ ಗೊತ್ತಿಲ್ಲ, ಸದರಿ ಠೇವಣಿ ಯಾವ

ರೂಪದಲ್ಲಿ ಮರುಪಾವತಿ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ಆದ್ದರಿಂದ ಸದರಿ ವಿಷಯ ಸಂಗತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಾಳಮಡ್ಡಿ ಮನೆ ಖರೀದಿ ಮಾಡಿದ ನಂತರ ಎಷ್ಟು ದಿವಸಕ್ಕೆ ಸತ್ತೂರನಲ್ಲಿರುವ ನಿವೇಶನ ಎಷ್ಟು ಮೊತ್ತಕ್ಕೆ ಮತ್ತು ಯಾವಾಗ ಖರೀದಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಖರೀದಿಯ ಹಿನ್ನೆಲೆ ನನಗೆ ಗೊತ್ತಿಲ್ಲ, ಆದರೆ ಸದರಿ ನಿವೇಶವನ್ನು ಸಹ ಚಂದ್ರಾಬಾಯಿ ಮತ್ತು ರಮೇಶ ಕೂಡಿ ಮಾಡಿರುತ್ತಾರೆ. ಈ ರೀತಿ ಕೂಡಿ ಖರೀದಿ ಮಾಡಿರುವ ಕುರಿತು ದಾಖಲೆಗಳು ನನ್ನ ಬಳಿ ಇಲ್ಲ. ಸದರಿ ದಾವಾದಾಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ವಾದಿಯ ಮನೆತನದ ಕುರಿತು ನನಗೆ ಸಂಪೂರ್ಣ ಮಾಹಿತಿ ಇಲ್ಲ ಎಂದರೆ ಕೆಲವೊಂದು ಇರುತ್ತದೆ ಕೆಲವೊಂದು ಇರುವುದಿಲ್ಲ ಎಂದು ಹೇಳುತ್ತಾರೆ. ವಾದಿಯು ತನ್ನ ಹೆಣ್ಣುಮಕ್ಕಳಿಗೆ ಲಾಭಾವಾಗಲಿ ಎಂದು ಈ ರೀತಿ ಸುಳ್ಳು ದಾವೆ ಹೂಡಿರುತ್ತಾರೆ ಎಂದರೆ ಸರಿಯಲ್ಲ.

***ಮರು ವಿಚಾರಣೆ: ಇಲ್ಲ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,

ಧಾರವಾಡ.